2

# ವಿಜಯಶಾಲಿಗಳಂತೆ ಹೆಚ್ಚಿನವರು

## (ರೋಮಾಪುರ 8)

*ರೂಪಾಂತರವಾದ ಜೀವಿತವು ಆಶೀರ್ವಾದದಲ್ಲಿ ನೆಲೆಗೊಂಡಿದೆ ...*

ರೋಮಾಪುರ 8:35-39 ವಿಜಯದ ಮೇಲೆ ಸಾಧಿಸುವದರ ಬಗೆಗೆ ಮಾತನಾಡುವುದಾಗಿದೆ! ನಾವೆಲ್ಲರೂ ಕೇಳಬಯಸುವ ಸಂದೇಶವು ಇಲ್ಲಿದೆ. ಜೀವಿತದ ಕಷ್ಟಗಳು ಪ್ರತಿಬದಿಯಲ್ಲಿಯೂ ಕಠಿಣವಾಗಿ ಒತ್ತುವವಗಳು ಆಗಿವೆ; ನಾವು ಇನ್ನು ಇವನ್ನು ಜಯಿಸಲಾರೆವು ಎಂದು ಕಾಣಿಸುವವುಗಳೂ ಆಗಿವೆ. ಆತ್ಮೀಕ ನಿಲುವುಗಳಿಂದಲೂ ಕೂಡಾ ಕೆಲ ಸಾರಿ ವಿಜಯವು ಅಸಾಧ್ಯವಾದುದು ಎಂದು ಅನ್ನಿಸುವತ್ತ ನಾವು ವಾಲುವವರಾಗಿದ್ದೇವೆ. ನಾವು ಕ್ರೈಸ್ತರಾಗಿದ್ದೇವೆ ನಿಜ, ಆದರೆ ನಮ್ಮ ಭೂತಕಾಲವು ಭಯಂಕರವಾದ ಪಾಪಗಳಿಂದ ಕೂಡಿತ್ತು; ವರ್ತಮಾನದಲ್ಲಿ, ಬಲುವಾದ ಶೋಧನೆಗಳು ಇವೆ; ಭವಿಷ್ಯದ ಬಗೆಗೆ ಬಲುವಾದ ಅನಿಶ್ಚಿತತೆಯು ಇದೆ. ನಾವು ನಮ್ಮ ಭೂತಕಾಲದಲ್ಲಿಯೇ ಹೇಗೆ ಇರಬಲ್ಲೆವು? ಪ್ರಚಲಿತವಾದ ಎಲ್ಲಾ ಶೋಧನೆಗಳಿಗೋಸ್ಕರ ನಾವು ನಮ್ಮ ನಂಬಿಕೆಗೆ ಆತುಕೊಳ್ಳಬಹುದು? ನಾಳೆಯು ತರಬಹುದಾದ ಸಮಸ್ಯೆಗಳಿಂದ ನಾವು ಹೇಗೆ ಉಳಿಯಬಲ್ಲೆವು? ವಿಜಯವನ್ನು ನಾವು ಹೇಗೆ ಸಂಪಾದಿಸಬಹುದು?

ಈ ಪರಿಚ್ಛೇದವು ನಾವು ಎಲ್ಲವನ್ನೂ ಮಾಡಲು ಸಾಧ್ಯ ಎಂದು ಹೇಳುವುದಾಗಿದೆ! ನಾವು ಶೋಧನೆ ಮತ್ತು ಪರಿಶೋಧನೆಗಳಿಂದ ಸಂಪೂರ್ಣ ವಿಮುಕ್ತರಾಗುತ್ತೇವೆ ಎಂದಲ್ಲ. ಆದರೆ ಶೋಧನೆ ಮತ್ತು ಪರಿಶೋಧಗಳು ಇದ್ದಾಗಲೂ ನಾವು ಅವುಗಳ ಮೇಲೆ ವಿಜಯ ಸಾಧಿಸಿ "ವಿಜಯಶಾಲಿಗಳು" ಆಗುತ್ತೇವೆ ಎಂದು ಹೇಳುವುದಾಗಿದೆ!

ಹಾಗೆ ನೋಡಿದರೆ ಇದು ಅದಕ್ಕಿಂತಲೂ ಮಿಗಿಲಾದದ್ದನ್ನು ಹೇಳುವಂತದ್ದಾಗಿದೆ. ಇದು "ವಿಜಯಶಾಲಿಗಳಿಗಿಂತ ಹೆಚ್ಚಿನವರು" ಎಂದು ಹೇಳುವುದಾಗಿದೆ. ಮೂಲತವಾಗಿ ಆ ಪದವು *hupernikaw* ಪದದಿಂದಾಗಿದೆ. *Nikaw* ಪದವು ಸಾಮಾನ್ಯವಾಗಿ "ವಿಜಯಶಾಲಿಯಾಗು" ಎಂಬ ಪದಕ್ಕೆ ಇರುವ ಅರ್ಥವಾಗಿದೆ. *Huper* ಎಂಬ ಪೂರ್ವಪದದ ಪದವು ಇಂಗ್ಲೀಷ್‌ನಲ್ಲಿಯ "hyper" ಎಂದಾಗಿದ್ದು ಅದು "ಹೆಚ್ಚಾದ" ಎಂಬರ್ಥವನ್ನು ಕೊಡುವಂತದ್ದಾಗಿದೆ. "Hyperactive" ಮಗುವು "ಅತಿಚಟುವಟಿಕೆಯುಳ್ಳ ಮಗು" ಎಂದು ಕರೆಯಲ್ಪಡುತ್ತದೆ. ಅಂತೆಯೇ ಪೌಲನು ನಾವು ಕೇವಲ ವಿಜಯ ಶಾಲಿಗಳು ಅಲ್ಲ. ಅತೀ ವಿಜಯಶಾಲಿಗಳು ಆಗಿದ್ದೇವೆ ಎಂದು ಹೇಳುತ್ತಾನೆ! ವಾಸ್ತವಾಗಿ, ಆತನ ಪ್ರಕಾರ ನಾವು "ಬಲು ಪ್ರಭಾವವುಳ್ಳ ವಿಜಯವನ್ನು"[1] ಸಾಧಿಸಿದ್ದೇವೆ. ಇನ್ನೊಂದು ಭಾಷಾಂತರದಲ್ಲಿ ಈ ರೀತಿಯಲ್ಲಿ ಭಾಷಾಂತರವಾಗಿದೆ. "ನಾವು ತುಂಬಿಹೊರಸೂಸುವ ವಿಜಯವನ್ನು ಸಾಧಿಸಿದ್ದೇವೆ" (Phillips); "ತುಂಬಿ ಹೊರಸೂಸುವ ವಿಜಯವು ನಮ್ಮದು" (NEB); "ನಾವು ತುಂಬಿ ಹೊರ ಸೂಸುವಷ್ಟು ಜಯಿಸಿದ್ದೇವೆ" (NASB); "ನಾವು ವಿಜಯವನ್ನು ಸಂಪೂರ್ಣಗೊಳಿಸಿದ್ದೇವೆ" (TEV); ನಾವು ಮಹಿಮಾ ಪೂರಿತ ವಿಜಯವನ್ನು ಹೊಂದಿದ್ದೆವೆ (Williams).

"ತುಂಬಿಹೊರಸೂಸುವ ವಿಜಯ" ಎಂದರೇನು ಎಂದು ನಾವೆಲ್ಲರೂ ಅರ್ಥೈಸಿಕೊಂಡಿರಬಹುದು. ಹೌದಲ್ಲವೇ? ನಾವು ಆ ಓಟದಲ್ಲಿದ್ದದ್ದಾದರೆ, ಅದು ಇಪ್ಪತ್ತಾರು

ಮೈಲಿ ಉದ್ದದ ಆ ಮ್ಯಾರಥಾನ ಓಟವನ್ನು ಜಯಿಸಿದಂತೆ ಮತ್ತು ನಾವು ಗೆದ್ದವು ಎಂದು ಹೇಳುವಂತೆ ಇದಾಗಿದೆ. ಆದರೆ ನಾವು ಕೇವಲ ಚಿಕ್ಕ ಅಳತೆಯಲ್ಲಿ ಗೆಲ್ಲುವುದಲ್ಲ; ಬದಲಾಗಿ ನಾವು ಹತ್ತು ಮೈಲಿಗಳ ಅಂತರದಿಂದ ಗೆಲ್ಲುವುದಾಗಿದೆ! ಅಥವಾ ನಾವು ಫುಟಬಾಲ್ ಆಟದಲ್ಲಿ 14-13ರ ಸ್ಕೋರನಿಂದಲ್ಲ - ನಾವು 99-0 ನಿಂದ ಗೆದ್ದಂತೆ! ಮತ್ತು ನಾವು ಗೆದ್ದವು ಆದರೆ ನಾವು ಬಿಜನೆಸ್‌ನಲ್ಲಿ ಗೆಲ್ಲಲು ಪ್ರಯತ್ನಿಸುತ್ತಿರುವುದಕ್ಕಾಗಿ ನಾವು ಕೇವಲ ಸಣ್ಣ ಲಾಭಕ್ಕಾಗಿ ಮಾತ್ರ ಮಾಡುತ್ತಿಲ್ಲ; ನಾವು ಮಿಲಿಯನ್ ಡಾಲರ್ ಲಾಭಕ್ಕಾಗಿ ಸಂಪಾದಿಸಿದ ಯಶಸ್ಸಿನಂತೆ! ಕ್ರೈಸ್ತರಾದ ನಾವು ಜೀವನದ ಕ್ಲಿಷ್ಟಗಳನ್ನು ಗೆಲ್ಲುವ ಮಾರ್ಗವು ಇದಾಗಿದೆ.

ಅಲ್ಪವಾದುದರ ಮೂಲಕ ಗೆಲ್ಲುವುದರಿಂದ ನಮಗೆ "ಕುಂಯಗೊಡುವುದನ್ನು" ದೇವರು ನಮಗೆ ಸೂಚಿಸುವುದಿಲ್ಲ. ಬದಲಾಗಿ ಆತನು ನಮಗೆ "ತುಂಬಿಹೊರಸೂಸುವ ವಿಜಯವನ್ನು" ಕೊಡುವವನಾಗಿದ್ದಾನೆ! ನಾವು "ವಿಜಯದ ಮೇಲಿದ್ದೇವೆ"! ಕ್ರೈಸ್ತರು "ವಿಜಯಶಾಲಿಗಳಂತೆ ಹೆಚ್ಚಿನವರು."

## ವಿಜಯಶಾಲಿಗಳಂತೆ ಹೆಚ್ಚಿನವರು ಯಾಕೆಂದರೆ ನಾವು ಒಳಗಾದವರು ಅಲ್ಲ (ರೋಮಾಪುರ 8:1-8)

"ಕ್ರಿಸ್ತ ಯೇಸುವಿನಲ್ಲಿರುವವನಿಗೆ ಅಪರಾದ ನಿರ್ಣಯವು ಈಗ ಇಲ್ಲವೇ ಇಲ್ಲ" (ರೋಮಾಪುರ 8:1). ನಾವು ಕ್ರೈಸ್ತರಾಗುವುದಕ್ಕೆ ಮುಂಚೆ, ನಾವು ಖಂಡನೆಯಲ್ಲಿ ಇದ್ದೆವು. ನಾವು ಪಾಪ ಮಾಡಿದ್ದೇವೆ, ಮತ್ತು ಪಾಪದ ದಂಡನೆಯು ನಮ್ಮ ಮೇಲೆ ಸಾರಲಾಗಿತ್ತು; ಅದು ಮರಣ! (ರೋಮಾಪುರ 6:23). ನಾವು ಮರಣಕ್ಕೆ ಒಪ್ಪಿಸಲ್ಪಟ್ಟವರಾಗಿದ್ದೇವೆ! ಆದರೆ "ಯೇಸು ಕ್ರಿಸ್ತನಲ್ಲಿ" ಆ ಶಿಕ್ಷೆಯಿಂದ ನಾವು ಮುಕ್ತರಾಗಿದ್ದೇವೆ. ನಾವು ಕ್ರಿಸ್ತನಲ್ಲಿ ನಂಬಿಕೆಯಿಟ್ಟು ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು, ಯೇಸು ದೇವರ ಕುಮಾರನೆಂದು ಅರಿಕೆಮಾಡಿ ಯೇಸು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು (ರೋಮಾಪುರ 6:3, 4). ಆಗ ನಮ್ಮ ಪಾಪಗಳು ಕ್ಷಮಿಸಲ್ಪಡುತ್ತವೆ; ನಾವು ಹೊಸ ಹುಟ್ಟನ್ನು ಪಡೆಯುತ್ತೇವೆ ಮತ್ತು ನಾವು ದೇವರ ಮಕ್ಕಳಾಗುತ್ತೇವೆ. ಹಾಗೂ ಮರಣದಂಡನೆಯು ತೆಗೆದುಹಾಕಲ್ಪಡುತ್ತದೆ! ಈ ದಂಡವನ್ನು ಮತ್ತೊಬ್ಬರು ಈಗಾಗಲೇ ತೆತ್ತಿದ್ದಾರೆ ಎಂದು ನಾವು ತಿಳಿದಿದ್ದೇವೆ! "ದೂಷಿಸಲಾದ ದೋಷಗಳು" ಎಂಬ ಪದಗಳನ್ನು ನಾವು ಕೇಳಿದ್ದೇವೆ. ನಾವು ಮರಣದ ಸಾಲಿನಲ್ಲಿ ಕುಳಿತ್ತಿದ್ದೇವೆ. ನಾವು ಕೇವಲ ದೈವನಿರ್ಣಾಯಕದ ಮರಣದಂಡನೆಗೆ ನಡೆಸುವ ದಿನಕ್ಕಾಗಿ ಕಾಯುತ್ತಿದ್ದೇವೆ. ಆಗಲೇ "ನೀನು ಸ್ವತಂತ್ರ್ಯನಾಗಿದ್ದೀಯಾ?" ಎಂಬ ಈ ಸ್ವಾಗತಾರ್ಹವಾದ ಸುದ್ದಿಯು ಬಂದಿತು; ನಾವು ಇನ್ನು ಮೇಲೆ ಪಾಪಕ್ಕೋಸ್ರ ಖಂಡನೆಯಲ್ಲಿ ಇರುವುದಿಲ್ಲ.

ಪಾಪಕ್ಕೆ ಮರಳುವದು ನಮಗೆ ಅಸಾಧ್ಯವಾಗಿರುವದು ಮತ್ತು ನಿರಂತರವಾಗಿ ನಾವು ತಪ್ಪಿಸಿಕೊಂಡಂತಹ ಖಂಡತೆಯ ಅನುಭವವನ್ನು ತಿರುಗಿ ಅನುಭವಿಸುತ್ತೇವೆ ಎಂದು ಇದರ ಅರ್ಥವಲ್ಲ. ಆದರೆ ನಂಬಿಗಸ್ತ ಕ್ರೈಸ್ತರಂತೆ, ನಾವು ಈಗ ಖಂಡನೆಯ ಅಡಿಯಲ್ಲಿ ಇಲ್ಲ!

## ವಿಜಯಶಾಲಿಗಳಂತೆ ಹೆಚ್ಚಿನವರು ಆಗಿದ್ದೇವೆ ಯಾಕೆಂದರೆ ನಾವು ದೇವರ ಆತ್ಮನನ್ನು ಹೊಂದಿದ್ದೇವೆ (ರೋಮಾಪುರ 8:9-14)

ಕ್ರೈಸ್ತರಾದ ನಾವು ಪರಿಶುದ್ಧಾತ್ಮನನ್ನು ಅಥವಾ ದೇವರ ಆತ್ಮನನ್ನು ಹೊಂದಿದ್ದೇವೆ. ನಾವು ಕ್ರೈಸ್ತರಾದಾಗ ಪರಿಶುದ್ಧಾತ್ಮನು ನಮಗೆ ಕೊಡಲ್ಪಡುತ್ತಾನೆ (ಅಪೊಸ್ತಲರ ಕೃತ್ಯ ಗಳು 2:38; 5:32). ಯಾಕೆ? ಒಂದು ಕಾರಣಕ್ಕಾಗಿ, ನಮ್ಮಲ್ಲಿ ವಾಸಿಸುವ ಆತ್ಮವು ನಾವು ರಕ್ಷಿಸಲ್ಪಟ್ಟಿದ್ದೇವೆ, ನಾವು ದೇವರ ಮಕ್ಕಳಾಗಿದ್ದೇವೆ ಎಂಬುದರ ವಾಸ್ತವದ ಸಾಕ್ಷಿಯಾಗಿದೆ. ಇನ್ನೊಂದಕ್ಕಾಗಿ, "ದೇಹದ ದುರಭ್ಯಾಸಗಳನ್ನು ನಾಶಮಾಡಿದರೆ" ಆತ್ಮನು ಸಮರ್ಥರನ್ನಾಗಿಸುವನು (ರೋ

ಮಾಪುರ 8:13). ಪಾಪದ ಮೇಲೆ ವಿಜಯೋತ್ಸವದ ಜೀವಿತ ಜೀವಿಸಲು ಸಹಾಯಿಸುವನು. ಮೂರನೆಯ ಸ್ಥಳದಲ್ಲಿ, ಆತ್ಮನ ಮೂಲಕ ನಾವು ಮರಣದಿಂದ ಎಬ್ಬಿಸಲ್ಪಡುವೆವು. ಮತ್ತು ಅಂತಿಮವಾಗಿ ಆತ್ಮನು ನಮ್ಮನ್ನು ನಡಿಸುವನು, ಒಳ್ಳೆಯದನ್ನು ಅನುಭವಿಸಿ ನಂತರ ಹೇಳುವ ಮಾರ್ಗದಲ್ಲಿ ಅಲ್ಲ, ಅದ್ಭುತಗಳ ಮಾರ್ಗದಲ್ಲಿ ಅಲ್ಲ, ಆದರೆ ವಿಶೇಷವಾಗಿ ವಾಕ್ಯವನ್ನು ತೋರ್ಪಡಿಸುವುದರ ಮೂಲಕವೇ.

ಆದರೆ ಪರಲೋಕದ ಅತಿಥಿಯಾದ ಪರಿಶುದ್ಧಾತ್ಮನನ್ನು ನಾವು ಹೊಂದಿದ್ದೇವೆ, ಆತನು ನಮ್ಮಲ್ಲಿ ವಾಸಿಸುವವನಾಗಿದ್ದಾನೆ ಕ್ರಿಸ್ತೀಯ ಜೀವಿತದಲ್ಲಿ ನಮಗೆ ಸಹಾಯಿಸುವವನಾಗಿದ್ದಾನೆ ಎಂಬುದು ನಾವು ಅರ್ಥೈಸಿಕೊಳ್ಳಲು ಅವಶ್ಯವಿರುವ ಮುಖ್ಯಸಂಗತಿಯಾಗಿದೆ "ಖಂಡನೆಯ ಅಡಿಯಲ್ಲಿ ಇಲ್ಲದಿರುವದು" ಮರಣವು ತೆಗೆದುಹಾಕಲ್ಪಟ್ಟಿದೆ - ನಮ್ಮ ಗತಕಾಲವು ಸುಪರ್ದಿಗೆ ತೆಗೆದುಕೊಳ್ಳಲ್ಪಟ್ಟಿದೆ. ಈಗ ವಾಸ್ತವದಲ್ಲಿ ನಾವು ನಮ್ಮಲ್ಲಿ ದೇವರ ವಾಸಿಸುವಿಕೆಯು ದೇವರಿಗೋಸ್ಕರ ವಾಸಿಸಲು ಸಹಾಯಿಸುವ ಆತ್ಮನನ್ನು ಹೊಂದಿದ್ದೇವೆ. ನಾವು "ವಿಜಯದ ಮೇಲಿದ್ದೇವೆ" ಎಂಬುದರಲ್ಲಿ ಅಚ್ಚರಿಯಲ್ಲ!

## ವಿಜಯಶಾಲಿಗಳಂತೆ ಹೆಚ್ಚಿನವರು ಆಗಿದ್ದೇವೆ ಯಾಕೆಂದರೆ ನಾವು ದೇವರ ಮಕ್ಕಳಾಗಿದ್ದೇವೆ (ರೋಮಾಪುರ 8:14-17)

ದೇವರ ಮಗು ಎಂದು ಕರೆಯಲ್ಪಡುವಂತಹ ಅಧಿಕಾರವು ಎಂತಹ ಅಮೋಘವಾದದ್ದು. ಪ್ರತಿಯೊಬ್ಬರ ಪ್ರೀತಿಗೆ ಪಾತ್ರನಾದ ಒಬ್ಬ ವೃದ್ಧ ಬೋಧಕನು ಮುಗುಳ್ನಗೆಯ ಮುಖದಿಂದ ಆ ಓಣಿಯಲ್ಲಿ ತೃಪ್ತಿಯಿಂದ, ಸಂತೋಷದಿಂದ ಯಾವ ಪ್ರಮಾದವು ಸಂಭವಿಸಿಯೇ ಇಲ್ಲವೆಂಬುತ್ತಾ ನೋಡುತ್ತಾ, ಬಡಿಗೋಲನ್ನು ನೇರವಾಗಿ - ಹಿಂದೆ - ಮುಂದೆ ಮಾಡುತ್ತಾ ದಾಪುಗಾಲು ಹಾಕುತ್ತಿದ್ದನು. ಒಬ್ಬರು ಆತನಿಗೆ "ನೀನು ಜಗತ್ತನ್ನೇ ನಿನ್ನ ಕೈಯಲ್ಲಿ ಹಿಡಿದುಕೊಂಡ ಹಾಗೆ ವರ್ತಿಸುತ್ತಿಯಲ್ಲ" ಎಂದು ಕೇಳಿದರು. ಆತನು ತನ್ನ ಹೆಜ್ಜೆಹಾಕುವುದನ್ನು ನಿಲ್ಲಿಸದೇ "ಹಾಗೇನಿಲ್ಲ" "ಆದರೆ ನನ್ನ ತಂದೆಯೇ ಮಾಲಿಕ"! ಎಂದು ಆತನು ಉತ್ತರಿಸಿದನು. ನಿಶ್ಚಯವಾಗಿ, ನಮ್ಮ ತಂದೆಯು ಜಗತ್ತನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡಿದ್ದಾನೆ! ನಾವು ಯಾಕೆ ಕಂಗೆಡಬೇಕು ಅಥವಾ ಧೈರ್ಯಗೆಡಬೇಕು? ನಾವು ಕಷ್ಟಗಳ ಮೇಲೆ ಮತ್ತು ಜಗತ್ತಿನ ತೊಂದರೆಗಳ ಮೇಲೆ ತುಂಬಿಹೊರಸೂಸುವ ವಿಜಯವನ್ನು ಸಾಧಿಸಲು ಶಕ್ತರು! ಯಾಕೆಂದರೆ ನಾವು ಜಗತ್ತನ್ನು ಸೃಷ್ಟಿಮಾಡಿದ ದೇವರ ಮಕ್ಕಳಾಗಿದ್ದೇವೆ!

## ವಿಜಯಶಾಲಿಗಳಂತೆ ಹೆಚ್ಚಿನವರು ಯಾಕಂದರೆ ನಾವು ದೇವರ ಬಾಧ್ಯಸ್ಥರಾಗಿದ್ದೇವೆ (ರೋಮಾಪುರ 8:15-17)

ನಾವು ದೇವರ ಮಕ್ಕಳಾಗಿರುವುದರಿಂದ ಎಲ್ಲದ್ದಕ್ಕೂ ಬಾಧ್ಯಸ್ಥರಾಗಿದ್ದೇವೆ ಎಂದು ತರ್ಕಬದ್ಧವಾಗಿ ಹೇಳಬಹುದು. ಒಬ್ಬ ಮಿಲಿಯನೇರನ ಮಗುವಾಗಿರುವದು ಮತ್ತು ವಾರಸುದಾರನಾಗಿರುವದು ಎಂಥ ಶ್ರೇಷ್ಟವಾದುದಲ್ಲವೇ? ಪ್ರತಿಯೊಂದನ್ನು ಹೊಂದಿದ ತಂದೆಯ ಮಗುವಾಗಿರುವದು ಮತ್ತು ಬಾಧ್ಯಸ್ಥನಾಗಿರುವದು ಎಷ್ಟೋ ಭಾಗ್ಯ ಶಾಲಿಯಲ್ಲವೇ!

ನಾವು "ಕ್ರಿಸ್ತನೊಂದಿಗೆ ಇರುವ ಬಾಧ್ಯಸ್ಥರು ಆಗಿದ್ದೇವೆ" ಎಂಬುದನ್ನು ಸಹ ಗಮನಿಸಿರಿ. ಆದಿಯಿಂದಲೂ ಆ ವಾಕ್ಯವು ದೇವರೊಂದಿಗೆ ಇದ್ದು ಆ ಸಮಯ ಬರುವ ತನಕ ಇದ್ದು ತನ್ನನ್ನು ಬರಿದು ಮಾಡಿಕೊಂಡು ಭೂಮಿಗೆ ಬರುವಾಗ ದೇವರ ವಿಶೇಷ ಅಧಿಕಾರವನ್ನು ಬಿಟ್ಟುಬಂದ ಕ್ರಿಸ್ತನ ಮಹಿಮೆಯನ್ನು, ಊಹಿಸಿಕೊಳ್ಳಿರಿ. ನಂತರ ಆತನು ತಿರುಗಿ ತನ್ನ ತಂದೆಯ ಬಲಪಾರ್ಶ್ವದಲ್ಲಿನ ಯೋಗ್ಯ ಸ್ಥಳಕ್ಕೆ ಮರಳುವಾಗ ಆತನು ಹೊಂದಿದ ಆ ಸ್ವಾಗತವನ್ನು ಊಹಿಸಿ ಕೊಳ್ಳಿರಿ. ಎಂಥ ಮಹಿಮೆ, ಗೌರವ, ಅಧಿಕಾರ, ಆಗ ಆತನು ಪಡೆದನು! ನಾವೂ

ಸಹ ಅದೇ ತರದ ಸ್ವಾಗತವನ್ನು ಅದೇ ತರದ ಮಹಿಮೆಯನ್ನು ಪಡೆಯುತ್ತೇವೆ! ನಾವು ಆತನ ಬಾಧ್ಯತೆಯಲ್ಲಿ ಪಾಲುದಾರರಾಗಿದ್ದೇವೆ! ಖಚಿತವಾಗಿ, ಆಗ, ನಿಶ್ಚಿಯವಾಗಿ ನಾವು "ವಿಜಯಶಾಲಿಗಳಂತೆ ಹೆಚ್ಚಿನವರು" ಎಂದು ಹೇಳಬಹುದು! ಎಂದು ಈ ಪರಿಚ್ಛೇದವು (ಇದನ್ನು ನೋಡಿ ಪ್ರಕಟಣೆ 3:20) ಕಲಿಸುವುದಾಗಿದೆ!

## ವಿಜಯಶಾಲಿಗಳಂತೆ ಹೆಚ್ಚಿನವರು ಯಾಕೆಂದರೆ ನಾವು ಪ್ರಭಾವವುಳ್ಳ ನಿರೀಕ್ಷೆಯನ್ನು ಹೊಂದಿದ್ದೇವೆ (ರೋಮಾಪುರ 8:18-25)

ಕ್ರೈಸ್ತರಾದ ನಾವು ಯಾವುದೇ ಸಮಸ್ಯೆಗಳಿಂದ ಅಥವಾ ಹಿಂಸೆಯಿಂದ, ಅಥವಾ ಮರಣದಿಂದ ವಾಗ್ದತ್ತ ಮುಕ್ತಿಯನ್ನು ಪಡೆಯುತ್ತೇವೆ ಎಂದು ಈ ಪರಿಚ್ಛೆದದಲ್ಲಾಗಲೀ ಹೊಸ ಒಡಂಬಡಿಕೆಯ ಯಾವುದೇ ಪರಿಚ್ಛೆದದಲ್ಲಾಗಲಿ ಇಲ್ಲವೆಂದು ನಾನು ಒತ್ತಿ ಹೇಳುತ್ತೇನೆ.

ಕ್ರೈಸ್ತನಾದ, ನಾವು ಎಲ್ಲದರಲ್ಲೂ ಬಾಧ್ಯಸ್ಥರಾಗಿದ್ದಾಗಲೂ ಸಹ ಎಲ್ಲದರಲ್ಲೂ ತೊಂದರೆಪಡುವದು ಯಾಕೆ? ಒಂದು ಕಾರಣವೆಂದರೆ: ರೋಗವು ಕ್ರೈಸ್ತನಲ್ಲಿ ಹೊಸ ಅರ್ಥವನ್ನು ಪಡೆಯುವ ಕಾರಣದಿಂದ ಇರಬಹುದು - ಇದು ಶಾಪಕ್ಕಿಂತ ಹೆಚ್ಚಾಗಿ ಆಶೀರ್ವಾದವನ್ನು ಪ್ರದರ್ಶಿಸುವುದಾಗಿದೆ. ಅದು ಅಸಾಧ್ಯವೆಂದು ತೋರಿ ಬಂದಾಗಲೂ, ಕ್ರೈಸ್ತನು ಯಾವಾಗಲೂ "ನಾವು ಎಷ್ಟರವರೆಗೆ ತೊಂದರೆಪಡುವೆವು ಅಥವಾ ಎಷ್ಟು ಸಮಯದವರೆಗೆ ನಾನು ತೊಂದರೆಪಡುವೆ ಎಂಬುದು ಮುಖ್ಯವಲ್ಲ. ಮೇಲೆ ನಮಗೊಂದು ಶ್ರೇಷ್ಟವಾದ ಜೀವಿತ ಕಾದಿದೆ. ಇಲ್ಲಿ ನಾನು ನೋವಿನಿಂದ ಅಥವಾ ತೊಂದರೆಯಿಂದ ನಮಗೆ ಶಮನವಾಗದೆ ಹೋದರೂ ಕೂಡಾ ನಾನು ಅಲ್ಲಿ ಹೊಂದಿಕೊಳ್ಳುವೆನು ಮತ್ತು ಅಲ್ಲಿನ ಶಮನವು ಶಾಶ್ವತವಾದದ್ದು." ಕ್ರೈಸ್ತನಾದವನು ಹೇಳುವಂತ ಈ ಹೇಳಿಕೆಯನ್ನು ಯಾವ ತತ್ವಜ್ಞಾನವಾಗಲೀ ಅಥವಾ ಯಾವ ಧರ್ಮವಾಗಲೀ ಹೇಳಲಾರವು.

## ವಿಜಯಶಾಲಿಗಳಂತೆ ಹೆಚ್ಚಿನವರು ಯಾಕೆಂದರೆ ಆತ್ಮನು ನಮಗೋಸ್ಕರ ಮಧ್ಯವರ್ತಿಯಾಗಿದ್ದಾನೆ (ರೋಮಾಪುರ 8:26, 27)

ಪರಿಶುದ್ಧಾತ್ಮವು ನಮಗಾಗಿ ಏನು ಮಾಡಿದ್ದಾನೆ? ಆತನು "ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ" (ರೋಮಾಪುರ 8:26) ಎಂದು ಈ ಪರಿಚ್ಛೇದವು ಹೇಳುತ್ತದೆ. ತಾನು ಪ್ರಕಟಿಸಿದ ವಾಕ್ಯದ ಮೂಲಕ ನಮಗೋಸ್ಕರ ನಾವು ಎದುರು ನೋಡುವುದನ್ನು ಪರಿಶುದ್ಧಾತ್ಮನು ಏನನ್ನಾದರೂ ಮಾಡಬಹುದು ಎಂಬುದನ್ನು ನಂಬದವರು ಇಲ್ಲಿದ್ದಾರೆ. ಆದರೆ ಈ ಪರಿಚ್ಛೆದವು, ಆತನು ಒಬ್ಬ ವ್ಯಕ್ತಿಯಾಗಿ ಮಾತ್ರ ಮಾಡುತ್ತಾನೆ ಮತ್ತು ಪ್ರಕಟಿಸಿದ ವಾಕ್ಯವು ಮಾಡುವಂತದ್ದನ್ನು ಅಲ್ಲ ಎಂದು ಹೇಳುವುದಾಗಿದೆ. ಆತನು ನಮಗೋಸ್ಕರ ದೇವರ ಚಿತ್ತಕ್ಕೆ ವಿರುದ್ಧವಾಗಿ ಬೇಡಿಕೊಳ್ಳುತ್ತಾನೆ ಅದು ಹೇಳದು; ಬದಲಾಗಿ, ದೇವರ ಚಿತ್ತಕ್ಕನುಗುಣ ವಾಗಿ ಬೇಡಿಕೊಳ್ಳುವವನಾಗಿದ್ದಾನೆ. ಮುಂದೆ, ಆತ್ಮನು ನಮಗಾಗಿ ಇದನ್ನು ಮಾಡುವವನು ಎಂದು ನಾವು ಬಲ್ಲವರಾಗಿದ್ದೇವೆ ಎಂಬುದು ಇದಕ್ಕೆ ಜೋಡಿಸಲ್ಪಟ್ಟಿದೆ; ಇದು ಆತ್ಮನು ನಮಗೆ ಯಾವುದೇ ವಿಶೇಷ ಅನುಭವವನ್ನು ಕೊಡುತ್ತಾನೆ ಎಂದಲ್ಲ; ಆದರೆ ಅದೇ ರೀತಿಯಲ್ಲಿ ನಾವು ರಕ್ಷಿಸಲ್ಪಟ್ಟಿದ್ದೇವೆ ಎಂದು ನಾವು ತಿಳಿದಿದ್ದೇವೆ; ಯಾಕೆಂದರೆ ಬೈಬಲ್, ಆತ್ಮನು ಹೇಳಿದ ಮಾತುಗಳನ್ನು, ನಮಗೆ ಹೇಳುವುದಾಗಿದೆ!

ಇನ್ನೂ ಪರಿಶುದ್ಧಾತ್ಮನು ಇದನ್ನು ಮಾಡುವವನಾಗಿದ್ದಾನೆಯೇ! ಹೇಗೆ? ನನಗೆ ಖಚಿತವಿಲ್ಲ, ನನ್ನ ಜೀವಿತದಲ್ಲಿ ಎಲ್ಲಾ ಸಂಗತಿಗಳನ್ನು ಒಳ್ಳೆಯ ಸಂಗತಿಗಳಾಗಿಯೇ ಒಟ್ಟಾಗಿ ಹೇಗೆ ಮಾಡಿದನು ಎಂಬುದು ನನಗರಿಯದು. ಆದರೆ ಆತ್ಮನು ಇದನ್ನು ಮಾಡುವವನಾಗಿದ್ದಾನೆ ಎಂದು ನಾನು ಬಲ್ಲೆನು! ದೇವರು ಕೇಳುವುದಕ್ಕಾಗಿ ಆತನು ಕಿವಿದೆರೆಯುತ್ತಾನೆ ಮತ್ತು

ಖಂಡಿತವಾಗಿ ನಮ್ಮ ಪ್ರಾರ್ಥನೆಗಳಿಗೆ ಉತ್ತರವನ್ನು ಬಿಡುಗಡೆ ಮಾಡುವವನಾಗಿದ್ದಾನೆ. ಕ್ರಿಸ್ತನು ನಮ್ಮ ಮಧ್ಯಸ್ಥಗಾರನು ಆಗಿದ್ದು ನಮ್ಮ ಪ್ರಕರಣದಲ್ಲಿ ತಂದೆಯೊಂದಿಗೆ ಪ್ರತಿವಾದಿ ಸುವವನು ಆಗಿದ್ದಾನೆ ಮತ್ತು ಹಾಗೆಯೇ ಪರಿಶುದ್ಧಾತ್ಮನು ನಮಗೋಸ್ಕರ ಮಧ್ಯವರ್ತಿಯು ಆಗಿದ್ದಾನೆ. ನಮ್ಮ ಹೃದಯದ ಅಭಿಲಾಷೆಗಳನ್ನು ತನ್ನ ವಾಕ್ಯಗಳಲ್ಲಿ ಪ್ರಕಟಿಸುತ್ತಾನೆ ಹೇಗೇ? ಅದನ್ನು ನಾನು ತಿಳಿಯೆನು. ದೇವರು ಕ್ರಿಸ್ತನು ಮತ್ತು ಪರಿಶುದ್ಧಾತ್ಮನು ಇವರೆಲ್ಲರೂ ನನ್ನ ಪ್ರಾರ್ಥನೆಯ ಬಗೆಗೆ ಆಸಕ್ತರಾಗಿದ್ದಾರೆ ಮತ್ತು ನನ್ನ ಪ್ರಾರ್ಥನೆಗೆ ಉತ್ತರಿಸಲು ಸಹಾಯನ್ನು ಒದಗಿಸುವವರಾಗಿರುತ್ತಾರೆ ಎಂದು ಮಾತ್ರ ನಾನು ಬಲ್ಲೆನು ಮತ್ತು ಇದಿಷ್ಟೇ ನನಗೆ ಸಾಕು! ನಾನು ತುಂಬಿಹೊರಸೂಸುವುದನ್ನು ಜಯಿಸಬಹುದು ಯಾಕೆಂದರೆ ನಾನು ಪ್ರಾರ್ಥಿಸುವಾಗ ಪರಿಶುದ್ಧಾತ್ಮನು ನನಗೆ ಸಹಾಯ ಮಾಡುವವನಾಗಿರುತ್ತಾನೆ.

## ವಿಜಯಶಾಲಿಗಳಂತೆ ಹೆಚ್ಚಿನವರು ಯಾಕೆಂದರೆ ನಾವು ದೇವರ ದೈವಿಕ ಸಂಕಲ್ಪದಿಂದ ಪ್ರಯೋಜನವನ್ನು ಪಡೆದಿದ್ದೇವೆ (ರೋಮಾಪುರ 8:28)

ಬೈಬಲಿನಲ್ಲಿ ಕಂಡು ಬರುವ ಬಲು ಪ್ರಮುಖವಾದ ವಾಗ್ದಾನಗಳಲ್ಲಿ ಒಂದನ್ನು ನಾವು ರೋಮಾಪುರ 8:28 ಪಡೆಯುತ್ತೇವೆ: ಅದು, "ಇದಲ್ಲದೇ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ."

ನಮಗೆ ಸಂಭವಿಸುವದು ಪ್ರತಿಯೊಂದೂ ಒಳ್ಳೆಯದೆ ಎಂದು ಇದು ಹೇಳುವುದಿಲ್ಲ ಎಂಬುದನ್ನು ಗಮನಿಸಿರಿ. ಬದಲಾಗಿ, "ಒಳ್ಳೆಯದಕ್ಕೋಸ್ಕರ ಎಲ್ಲಾ ಸಂಗತಿಗಳು ಒಟ್ಟಾಗಿ ಕಾರ್ಯಮಾಡುವದಕ್ಕೆ ದೇವರು ಕಾರಣನಾಗಿದ್ದಾನೆ" ಅಥವಾ "ಪ್ರತಿಯೊಂದು ಸಂಗತಿಗಳು ಒಟ್ಟಾಗಿ ದೇವರಿಗೋಸ್ಕರ ಕಾರ್ಯಮಾಡುತ್ತವೆ" (KJV), ಅಥವಾ "ಪ್ರತಿಯೊಂದು ಸಂಗತಿಗಳು ಒಳ್ಳೆಯದು ಸಂಭವಿಸುವುದಕ್ಕೋಸ್ಕರ ಹೊಂದಿಕೊಳ್ಳುವವುಗಳು ಆಗಿವೆ" (Phillips) ಎಂದು ಇವುಗಳು ಹೇಳುವವುಗಳು ಆಗಿದೆ. ದೇವರು ನಮ್ಮ ಜೀವಿತದ ಕೆಟ್ಟದು ಅದರಂತೆಯೇ ಒಳ್ಳೆಯದು ಎಂಬ ಹೊರಗೆ ತೋರುವ ದೈವಯೋಗದ ಘಟನೆಗಳನ್ನು ತೆಗೆದುಕೊಳ್ಳುತ್ತಾನೆ - ಮತ್ತು ವಾಸ್ತವವಾಗಿ ಕೆಟ್ಟದ್ದು ಕಾಣಿಸಿಕೊಂಡರೂ ಆತನು ಒಳ್ಳೆಯದನ್ನೇ ತರುವ ನಿಟ್ಟಿನಲ್ಲಿ ಆತನು ಅವುಗಳನ್ನು ಯೋಗ್ಯವಾಗಿ ಜೊತೆಯಾಗಿ ಇರಿಸುವವನಾಗಿದ್ದಾನೆ. ಮತ್ತು ಒಳ್ಳೇಯದು ಇಲ್ಲ ಕೇವಲ "ಅಲ್ಹಾದಕರವಾದುದು" ಅಥವಾ "ಸಂತೋಷದಾಯಕವಾದದ್ದು" ಎಂದು ಅರ್ಥೈಸಿ ಕೊಳ್ಳುವದಕ್ಕಾಗಿ ಅಲ್ಲ, ಆದರೆ ಅಂತಿಮ ವಾಗಿ ಯಾವುದು, ಕೇವಲ ತಾತ್ಕಾಲಿಕವಾಗಿ ಒಳ್ಳೆಯದು ಅಲ್ಲ; ಯಾವದು ದೇವರಿಗೋಸ್ಕರ ಒಳ್ಳೇಯದಾಗುತ್ತದೆಯೋ ಮತ್ತು, ಬಹಳ ದಿನಗಳವರೆಗೆ ನಮಗೆ ಒಳ್ಳೆಯದು ಆಗಿರುತ್ತದೆಯೋ ಅದೇ ಆಗಿದೆ.

ಮುಂದೆ, ಈ ವಾಗ್ದಾನವು ಪ್ರತಿಯೊಬ್ಬರಿಗೆ ಆಗಿರುವುದಿಲ್ಲ ಎಂಬುದನ್ನು ಗಮನಿಸಿರಿ. ಈ ಯುಗದಲ್ಲಿ ಕ್ರೈಸ್ತರು ಮಾತ್ರವಾಗಿರುವ "ಆತನ ಉದ್ದೇಶಗಳ ಪ್ರಕಾರಕರೆಯಲ್ಪಡುವ" ಕ್ರೈಸ್ತರಿಗಾಗಿ ಇದು ಇದೆ. ನೀನು ಕ್ರೈಸ್ತನಲ್ಲವಾದರೆ ಈ ವಾಗ್ದನವನ್ನು ನೀನು ಪ್ರತಿಪಾದಿಸ ಲಾರೆ. ಆದರೆ ಕ್ರೈಸ್ತನಾಗುವುದರ ಇದನ್ನು ನೀನು ಮಾಡಬಲ್ಲೆ.

## ವಿಜಯಶಾಲಿಗಳಂತೆ ಹೆಚ್ಚಿನವರು ಯಾಕೆಂದರೆ ನಾವು ರಕ್ಷಿಸಲ್ಪಟ್ಟಿದ್ದೇವೆ ಎಂದು ಮೊದಲೆ ಗೊತ್ತುಮಾಡಿದೆ (ರೋಮಾಪುರ 8:29, 30)

ಈ ವಚನಗಳಿಂದ ನಮಗೆ ಕಲಿಯಬೇಕಾದ ಪ್ರಮುಖ ಸಂಗತಿಗಳು ಎಂದರೆ ನಾವು ರಕ್ಷಿಸಲ್ಪಟ್ಟಿದ್ದೇವೆ ಎಂದು ಮೊದಲೇ ಗೊತ್ತು ಮಾಡಲ್ಪಟ್ಟಿದೆ! ಮೊದಲು ಗೊತ್ತು ಮಾಡುವಿಕೆ

ಎಂಬುದು, ಸರಿಯಾಗಿ ಅರ್ಥೈಸಿಕೊಂಡ ಬೈಬಲ್ ಸಿದ್ಧಾಂತವಾಗಿದೆ.

ಇದರರ್ಥವು ಕ್ಯಾಲ್ವನಿಸ್ಟಿಕ್ ಪಂಥದ ಪೂರ್ವನಿಷ್ಕರ್ಶವಾದವು ಸರಿ ಎಂಬುದಾಗಿ ಅಲ್ಲ. ನಾನು ಅರ್ಥೈಸಿಕೊಂಡಂತೆ ಜಗದುತ್ಪತ್ತಿಗಿಂತ ಮೊದಲೇ ದೇವರು ರಕ್ಷಿಸಲ್ಪಟ್ಟರ ಪಟ್ಟಿಯನ್ನು ಮಾಡಿರುತ್ತಾನೆ ಮತ್ತು ಯಾರೊಬ್ಬರೂ ಆ ಪಟ್ಟಿಯಲ್ಲಿರುವವನನ್ನು ಬದಲಾಯಿಸಲಾರು ಎಂದು ಕ್ಯಾಲ್ವನಿಸ್ಟಿಕ್ ಪಂಥವು ಬೋಧಿಸುವುದಾಗಿದೆ. ಈ ಅಭಿಮತವು, ತಿರಸ್ಕರಿಲ್ಪಡಬೇಕು ಯಾಕೆಂದರೆ ನಾವು ರಕ್ಷಣೆ ಹೊಂದಲು ಆಯ್ಕೆಯನ್ನು ಬೈಬಲ್ ನಮಗೆ ಬೋಧಿಸುವುದಾಗಿದೆ ಕ್ಯಾಲ್ವನಿಸ್ಟಿಕ್ ಪಂಥದ ವಾದವನ್ನು ಈ ಆಯ್ಕೆಯನ್ನು ನಂಬುವುದಿಲ್ಲ.

ಹೇಗೋ, ನಾವು ರಕ್ಷಿಸಲ್ಪಟ್ಟಿರುವದು ಪೂರ್ವಯೋಜಿತವಾದದ್ದು ಹೇಗೇ? ಬೈಬಲ್ ಮುಂತಿಳಿಸುವಿಕೆಯನ್ನು ಅರ್ಥೈಸಿಕೊಳ್ಳುವದರ ಉತ್ತಮ ಮಾರ್ಗ ಎಂದರೆ ದೇವರು ಕ್ರಿಸ್ತನ ಮೂಲಕ ಮಾನವರನ್ನು ರಕ್ಷಿಸುವುದನ್ನು ಮೊದಲೇ ಗೊತ್ತುಮಾಡಿದ್ದು ಎಂಬುದನ್ನು ಗುರುತಿಸುವದು. ನಂಬಿಕೆ ಮತ್ತು ವಿಧೇಯತೆಯಿದ ನಾವು ಕ್ರಿಸ್ತನನ್ನು ಅಂಗೀಕರಿಸುವ ನಿರ್ಧಾರವನ್ನು ನಾವು ಮಾಡಿದಾಗ, ನಾವು ನಮ್ಮನ್ನು ದೇವರ ಮುಂತಿಳಿಸುವಿಕೆಯಲ್ಲಿ ಇಟ್ಟುಕೊಳ್ಳುವವರಾಗಿದ್ದೇವೆ. ನಾವು ರಕ್ಷಿಸಲ್ಪಟ್ಟಿದ್ದೇವೆ ಎಂದು ಮುಂತಿಳಿಸಲಾಗಿತ್ತು ಎಂದು ನಾವು ಹೇಳಬಹುದು.

ಆದರೆ ಈ ವಚನಗಳು ಸೈದ್ಧಾಂತಿಕ ಸತ್ಯವನ್ನು ಬೋಧಿಸುವ ವಿಚಾರವನ್ನು ಹೊಂದಿಲ್ಲ. ಅವುಗಳು ಕ್ರೈಸ್ತನ ಆದರಣೆಯನ್ನುಂಟುಮಾಡುವ ಉದ್ದೇಶವನ್ನು ಹೊಂದಿವೆ. ಅದನ್ನು ಮಾಡಲು ಅವುಗಳಿಗೆ ಹೇಗೆ ಸಾಧ್ಯ? ಅದರಲ್ಲದೇ ನಮ್ಮ ರಕ್ಷಣೆಯು ಆಕಸ್ಮಿಕವಲ್ಲ, ದೇವರ ಯೋಜನೆಯ ಅಡಿಯಲ್ಲಿ ನಡೆದ ಸಂಗತಿ ಎಂದು ನಮಗೆ ಭರವಸೆಯನ್ನು ಕೊಡುವವುಗಳು ಆಗಿವೆ.

ಒಂದು ದೃಷ್ಟಾಂತದಂತೆ, ಒಬ್ಬ ಗೋಲ್ಫರನು ತನ್ನ ಮೊದಲ ಹೊಡತವನ್ನು ಒರಟಾದ ರೀತಿಯಲ್ಲಿ ಬಲಬದಿಗೆ ಹೊಡೆದನು. ಅದು ಎಡಬದಿಗೆ ಒರಟಾಗಿ ಹೋಗಲಿ ಎಂದು ಅಪೇಕ್ಷಿಸಿ ಆತನು ಒಳ್ಳೆಯ ಸುಧಾರಿಸುವ ಹೊಡೆತನವನ್ನು ಹೊಡೆದನು. ಆತನ ಮೂರನೆಯ ಹೊಡತೆಯು ಹಸಿರನ್ನು ತಲುಪಿಸುತ್ತಿತ್ತು, ಆದರೆ ಅದು ಗುಳಿಯ ಮೇಲೆ ಹೋಯಿತು. ಆತನ ನಾಲ್ಕನೆಯ ಹೊಡೆತೆದಲ್ಲಿ ಆತನು ಆ ಕಂದಕವನ್ನು ಸ್ಫೋಟ ಗೊಳಿಸಿದನು ಮತ್ತು ಬಾಲನ್ನು ಕಪ್ಪಿನೊಳಕ್ಕೆ ಹೊಡೆದನು - ಮತ್ತು ಆತನು ಪಾರನ್ನು ಹೊಂದಿದನು. ಅಂಥ ಒಬ್ಬ ಗೋಲ್ಫರನನ್ನು ಕೆಲಸಾರಿ ಹೋರಾಟಗಾರ ಎಂದು ಹೇಳುತ್ತಾರೆ. ಆತನು ಕೆಲ ವ್ಯತಿರಿಕ್ತ ಪರಿಸ್ಥಿತಿಗಳಿಂದ ಹೊರಬಂದವನಾಗಿರುತ್ತಾನೆ ಮತ್ತು ತಾನು ಹೋಗುವಂತ ಮಾರ್ಗವನ್ನೇ ಮಾಡುವುದನ್ನು ತೋರಿಸುವವನಾಗಿರುತ್ತಾನೆ ಮತ್ತು ಅಂತಿಮವಾಗಿ ತನ್ನ ಉದ್ದೇಶವನ್ನು ಸಾಧಿಸುತ್ತಾನೆ. ಅದೇ ತರದ ಪದವನ್ನು ನಾವು ಫುಟ್ ಬಾಲ್ ಆಟದಲ್ಲಿ ಬಳಸುತ್ತೇವೆ. ಒಬ್ಬ ಫುಟ್ ಬಾಲ್ ಆಟಗಾರನು ನಿಯೋಜಿತವಿಲ್ಲದ ದಿಶೆಗೆ ಓಟಗಳ ಅಥವಾ ಪಾಸುಮಾಡುವ ಮೂಲಕ ಮುರಿದ ಆಟವನ್ನು ತೆಗೆದುಕೊಳ್ಳುವವನನ್ನು "ಹೊರಾಟಗಾರ" ಎಂದು ಕರೆಯುತ್ತಾರೆ.

ರೋಮಾಪುರ 8:29, 30ರಲ್ಲಿನ ಸಂತಿಗಳು ದೇವರು "ಹೋರಾಟಗಾರ ಅಲ್ಲ" ಎಂಬ ಭರವಸ ಕೊಡುವವುಗಳು ಆಗಿವೆ. ಆತನು ಆಟವನ್ನ ಸರಿಹೊಂದಿಸಿಕೊಳ್ಳುವುದಿಲ್ಲ. ಆತನು ತಪ್ಪು ಹೆಜ್ಜೆಯನ್ನು ಇಡುವುದಿಲ್ಲ ಹಾಗೂ ಅವುಗಳನ್ನು ಯಾವಾಗಲೂ ಹಿಂದಕ್ಕೆ ಪಡಕೊಳ್ಳುವುದಿಲ್ಲ. ಆತನು ಜಗತ್ತಿಗೋಸ್ಕರ ರಕ್ಷಣಾ ಯೋಜನೆಯನ್ನು ಮಾಡಿದನು ಮತ್ತು ಆ ರಕ್ಷಣಾ ಯೋಜನೆಯನ್ನು ಕಾರ್ಯಗತಗೊಳಿಸಿದನು! ಆ ಯೋಜನೆಯ ಪ್ರಕಾರ ನಾವು ರಕ್ಷಣೆಯನ್ನು ಹೊಂದಿದ್ದೇವೆ ಎಂಬ ಭರವಸೆಯನ್ನು ನಾವು ಹೊಂದಿದ್ದೇವೆ! ನಮ್ಮ ರಕ್ಷಣೆಯು ದೇವರ ನಿತ್ಯತ್ವದ ಉದ್ದೇಶಕ್ಕುನುಸಾರವಾಗಿದೆ. ನಾವು ರಕ್ಷಣೆ ಹೊಂದುವದು ಪೂರ್ವಯೋಜಿತವಾದುದರಿಂದ, ನಾವು ವಿಜಯಶಾಲಿಗಳಿಂದ ಹೆಚ್ಚಿನವರು ಆಗಿದ್ದೇವೆ.

## ನಾವು ವಿಜಯಶಾಲಿಗಳಿಗಿಂತ ಹೆಚ್ಚಿನವರು ಯಾಕೆಂದರೆ ದೇವರು ನಮ್ಮನ್ನು ಪ್ರೀತಿ ಮಾಡುವವನಾಗಿದ್ದಾನೆ (ರೋಮಾಪುರ 8:31-39)

ದೇವರ ಪ್ರೀತಿಯುಗಾಧವಾದದ್ದು: "ಆತನು ತನ್ನ ಸ್ವಂತ ಮಗನನ್ನು ನಮಗಾಗಿ ಕೊಟ್ಟನು" ದೇವರ ಪ್ರೀತಿಯು ಬಲವುಳ್ಳದ್ದಾಗಿದೆ; "ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು?" (ರೋಮಾಪುರ 8:31). ಮತ್ತು ದೇವರ ಪ್ರೀತಿಯು ನಿರಂತರವಾದದ್ದಾಗಿದೆ: "ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು?" (ರೋಮಾಪುರ 8:35) ಮತ್ತು ಅದಕ್ಕೆ ಉತ್ತರವು ಯಾರೂ ಇಲ್ಲ. ನಮ್ಮ ಮತ್ತು ದೇವರ ಪ್ರೀತಿಯ ಮಧ್ಯ *ಯಾವದು ಬಾರದು* ಎಂಬ ಪಟ್ಟಿಯತ್ತ ದೃಷ್ಟಿ ಹರಿಸುವಾ, ಅಲ್ಲಿ ಜೋಡಿಸಲ್ಪಟ್ಟ ಯಾವುದಾದರು ಇದೆ ಎಂದು ನೀನು ಯೋಚಿಸಿದ್ದಿಯಾ? ಕೆಲವರು ಅದನ್ನು ಮಾಡಲು ಪ್ರಯತ್ನಿಸಿದ್ದಾರೆ ಎಂದು ಪೌಲನಿಗೆ ಕಂಡಿರಬೇಕು ಅಂತೆಯೇ ಆತನು "ನಾನು ಏನನ್ನಾದರೂ ಬಿಟ್ಟಿದ್ದರೆ, ಅದನ್ನು "ಯಾವುದೇ ಸೃಷ್ಟಿಸಲಾದ ಸಂಗತಿಗಳಿಗೆ" ಎಂಬ ಈ ಪದಗಳಲ್ಲಿ ಸೇರಿಸಬಯಸುತ್ತೇನೆ ಎಂದು ಹೇಳುವುದರ ಮೂಲಕ ಸಮಾರೋಪಿಸುತ್ತಾನೆ. ಸೃಷ್ಟಿಯಲ್ಲಿ ಇಲ್ಲದ್ದು, ಜಗತ್ತಿನಲ್ಲಿ ಇಲ್ಲದ್ದು ನಮ್ಮ ಮತ್ತು ದೇವರ ಪ್ರೀತಿಯ ಮಧ್ಯ ಬರುವುದಾಗಿದೆ. ಉದಾಹರಣೆಗೋಸ್ಕರ, ಪರಮಾಣು ಯುದ್ಧದ ದೈವಜ್ಞಾನ ವಿವಕ್ಷೆಯ ಬಗೆಗೆ ನೀನು ಎಂದಾದರೂ ಆಶ್ಚರ್ಯಪಟ್ಟಿದ್ದಿಯಾ?

ಪರಮಾಣು ಯುದ್ದ ಇದ್ದಿದ್ದಾದರೆ, ಅದು ಧಾರ್ಮಿಕ ನಿಲುವಿನಿಂದಾದುದರ ಬಗೆಗೆ ನಾವು ಏನನ್ನು ಹೇಳುತ್ತಿರಲಿಲ್ಲವೇ? ಬೈಬಲ್ ಇದನ್ನು ಸೂಚಿಸಿಲ್ಲವೋ? ಹೌದು, "ಸೃಷ್ಟಿಸಲ್ಪಟ್ಟ ಯಾವುದೇ ಸಂಗತಿಗಳು" ಅದನ್ನು ಈ ಪದಪುಂಜದಲ್ಲಿ ಸೇರಿಸುವುದರ ಮೂಲಕ ಅದನ್ನು ಮಾಡಿದೆ. ಪರಮಾಣು ಯುದ್ಧದ ಅಥವಾ ವಿನಾಶದ ಬಗೆಗೆ ನಾವು ಹೇಳಬಹುದಾದ ಒಂದು ಸಂಗತಿ; ಅದು ಸಂಭವಿಸಿದ್ದಾದರೆ, ದೇವರು ನಮ್ಮನ್ನು ಪ್ರೀತಿಸುವದರಿಂದ ಹೊರಗೆ ಉಳಿಯುತ್ತಾನೆ ಎಂದು ಇದರ ಅರ್ಥವಲ್ಲ. ದೇವರು ನಮ್ಮನ್ನು ಇನ್ನೂ ಪ್ರೀತಿಸುವವನಾಗಿದ್ದಾನೆ, ಮತ್ತು ಅದನ್ನು ಸೃಷ್ಟಿಯು ಯಾವುದೇ ಸಂಗತಿಯು ಬದಲಾಯಿಸಲಾರದು.

## ಮುಕ್ತಾಯ

"ಈ ಎಲ್ಲಾ ಆಶೀರ್ವಾದಗಳಿಂದ, 'ವಿಜಯದ ಮೇಲೆ' ಇರುವವರಂತೆ ನಮ್ಮನ್ನು ನಾವು ಯೋಚಿಸಿಕೊಳ್ಳಬೇಕು" ಎಂಬ ಈ ವಾಸ್ತವದಿಂದ ನಾವು ಪ್ರಭಾವಿತರಾಗಿರ ಬೇಕು ಎಂದು ನಾನು ಆಶಿಸುತ್ತೇನೆ. ನಾವು ವಿಜಯಶಾಲಿಗಳಿಗಿಂತ ಹೆಚ್ಚಿನವರು! ನಾವು ವಿಜಯದಿಂದ ತುಂಬಿ ಹೊರಸೂಸುವವರಾಗಿದ್ದೇವೆ!

ಈ ಆಮಂತ್ರಣಕ್ಕೆ ಪ್ರತಿಕ್ರಯಿಸುವ ಅವಶ್ಯಕತೆಯಿರುವವರಿಗಾಗಿ ನಾವು ಏನು ಹೇಳೋಣ?

ಮೊದಲು, ಅವುಗಳಿಲ್ಲದೇ, ನಿನಗೆ ಇನ್ನೂ ಒಂದು ವಾರಕ್ಕಾಗಿ ಇನ್ನೂ ಒಂದು ದಿನಕ್ಕಾಗಿ, ಇನ್ನೂ ಒಂದು ತಾಸಿಗಾಗಿ, ಇರಲು ಯಾಕೆ ಬಯಸುತ್ತಿ? ಕ್ರೈಸ್ತರು ಎಲ್ಲಾ ವಿಜಯಶಾಲಿಗಳಿಗಿಂತ ಹೆಚ್ಚಿನವರಾದ ಎಂಬುದೇ ನೀನು ಕ್ರೈಸ್ತನಾಗಿರುವುದಕ್ಕೆ ಮೊದಲ ಕಾರಣವಾಗಿರಬೇಕು. ನೀನು ನಂಬಿಗಸ್ತ ಕ್ರೈಸ್ತನಾಗದಿದ್ದರೆ, ಕ್ರಿಸ್ತನೆಡೆಗೆ ತಿರುಗಿಕೋ.

ಎರಡನೆಯದಾಗಿ, ದೇವರ ಪ್ರೀತಿಯಿಂದ ನಮ್ಮನ್ನು ಯಾವುದು ಬೇರೆ ಮಾಡದು ಎಂದು ಹೇಳಿದೆ. ಅದು ನಿಖರವಾಗಿ ನಿಜವಲ್ಲ. ನಿನ್ನನ್ನು ದೇವರ ಪ್ರೀತಿಯಿಂದ ಬೇರೆ ಮಾಡುವ ಎರಡು ಸಂಗತಿಗಳು ಈ ಪಟ್ಟಿಯಿಂದ ಬಿಟ್ಟುಹೋಗಿರುವುದನ್ನು ನೀನು ಗಮನಿಸಿದ್ದೀಯಾ? ಪಾಪವು ದೇವರ ಪ್ರೀತಿಯ ಪ್ರಯೋಜನಗಳ ಫಲದಿಂದ ನಿಮ್ಮನ್ನು ಬೇರೆಮಾಡುವುದಾಗಿದೆ. ನೀನು ಪಾಪದಲ್ಲಿರುವಾಗಲೂ ದೇವರು ನಿಮ್ಮನ್ನು ಪ್ರೀತಿಸುವವನಾಗಿದ್ದಾನೆ, ಆದರೆ ನೀವು ಪಾಪದಲ್ಲಿರುವಷ್ಟು ಕಾಲ ನೀವು ಪ್ರೀತಿಯ ಪ್ರಯೋಜನವನ್ನು ಹೊಂದಿಕೊಳ್ಳಲಾರಿರಿ.

ಇನ್ನೊಂದು ಬಿಟ್ಟು ಹೋದ ಸಂಗತಿಯು ನೀವು ಆಗಿದೆ. ನೀವು ನಿಮ್ಮ ಸ್ವಂತ ಆಯ್ಕೆಯ ಪಾಪದಿಂದ ನಿಮ್ಮನ್ನು ನೀವು ದೇವರ ಪ್ರೀತಿಯಿಂದ ಬೇರ್ಪಡಿಸಿಕೊಂಡಿದ್ದೇ ಆಗಿದೆ. ನೀವು ದೇವರಿಂದ ದೂರವಿದ್ದೀರಾ? ಸರಿದು ಹೋದವರು ಯಾರು? ದೇವರಲ್ಲ. ನೀವು ನೀವು ನಿಮ್ಮ ಸ್ವಂತ ಪಾಪದಿಂದ ನಿಮ್ಮನ್ನು ದೇವರ ಪ್ರೀತಿಯಿಂದ ಬೇರ್ಪಡಿಸಿಕೊಂಡಿದ್ದೀರಿ. ನೀವು ಹೇಗೆ ಆತನೆಡೆಗೆ ಮರಳಬೇಕು? ನಿಮ್ಮ ಸ್ವಂತ ಪಾಪದಿಂದ ನಿಮ್ಮನ್ನು ದೇವರ ಪ್ರೀತಿ ಯಿಂದ ಬೇರ್ಪಡಿಸಿಕೊಂಡಿದ್ದೀರಿ. ನೀವು ಹೇಗೆ ಆತನೆಡೆಗೆ ಮರಳಬೇಕು? ನಿಮ್ಮ ಸ್ವಂತ ಆಯ್ಕೆಯಿಂದಲೇ. ಆ ದೇವರು ನಿನಗೆ ಕೊಡಮಾಡಬೇಕೆಂದಿರುವ ಆಶೀರ್ವಾದವನ್ನು ಆಯ್ಕೆಮಾಡಿಕೊಡುವುದರಿಂದ ಮೂಲಕವೇ. ಯೇಸು ಕ್ರಿಸ್ತನಲ್ಲಿರುವಂಥ ರಕ್ಷಣೆಯನ್ನು ಒಪ್ಪಿಕೊಳ್ಳುವುದರ ಮೂಲಕ ಆಶೀರ್ವಾದಗಳನ್ನು ನೀನು ಸ್ವೀಕರಿಸಿಕೊಳ್ಳುತ್ತೀಯಾ?

---

ಟಿಪ್ಪಣಿ

[1]Walter Bauer, *A Greek-English Lexicon of the New Testament* revised by William F. Arndt and F. Wilbur Gingrich (Chicago, Ill.: The University of Chicago Press, 1957), p. 849.